# ಡಾ|| ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ / ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಳಗಾವಿ ಜಿಲ್ಲೆ

## ನಿಗಮಗಳ ವಿವಿಧ ಯೋಜನೆಗಳ ಸಂಕ್ಷಿಪ್ತ ಮಾಹಿತಿ

## (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ)

### 1. ಸ್ವಯಂ ಉದ್ಯೋಗ ಯೋಜನೆ :

ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿಗೆ ಯಾವುದೇ ಸಣ್ಣ ವ್ಯಾಪಾರ, ಹೈನುಗಾರಿಕೆ, ಚರ್ಮಗಾರಿಕೆ, ಎತ್ತು-ಗಾಡಿ, ಪಾನಶಾಪ್, ಇತ್ಯಾದಿ ಆದಾಯ ತರುವಂತಹ ಉದ್ದೇಶಗಳಿಗೆ ಸಾಲ ಸೌಲಭ್ಯ ಪಡೆಯಬಹುದಾಗಿರುತ್ತದೆ. ಯೋಜನಾ ವೆಚ್ಚ ರೂ. 50,000/- ಗಳಿಂದ ರೂ. 1,00,000/- ವರೆಗಿದ್ದು, ಇದರಲ್ಲಿ ಶೇಕಡಾ 50 ಭಾಗ ಅಥವಾ ಗರಿಷ್ಠ ರೂ. 35,000/- ನಿಗಮದಿಂದ ಸಹಾಯಧನವನ್ನಾಗಿ ಹಾಗೂ ಉಳಿದ ಭಾಗ ಬ್ಯಾಂಕ್ ಸಾಲವಾಗಿ ನೀಡಲಾಗುವುದು.

### 2. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ಐ. ಎಸ್. ಬಿ. ಯೋಜನೆ) :

ಈ ಯೋಜನೆಯಡಿ ಯಾವುದೇ ಸಣ್ಣ ಕೈಗಾರಿಕೆ, ಸರಕು ಸಾಗಾಣಿಕೆ / ಪ್ರಯಾಣಿಕರ ವಾಹನ, ಟ್ರ್ಯಾಕ್ಟರ್, ಆಟೋರಿಕ್ಷಾ ಇತ್ಯಾದಿ ಖರೀದಿಸಲು / ಪ್ರಾರಂಭಿಸಲು ಸಾಲ ಸೌಲಭ್ಯ ಪಡೆಯಬಹುದಾಗಿರುತ್ತದೆ. ಯೋಜನಾ ವೆಚ್ಚ ರೂ. 1,00,000/- ಗಳಿಂದ ರೂ. 10.00 ಲಕ್ಷದವರೆಗಿದ್ದು, ಇದರಲ್ಲಿ ಶೇಕಡಾ 33 ರಷ್ಟು ಅಥವಾ ಗರಿಷ್ಠ ರೂ. 2,00,000/- ನಿಗಮದಿಂದ ಸಹಾಯಧನ ರೂಪದಲ್ಲಿ ಹಾಗೂ ಉಳಿದ ಭಾಗ ಬ್ಯಾಂಕ್ ಸಾಲವಾಗಿ ನೀಡಲಾಗುವುದು.

### 3. ಭೂ ಒಡೆತನ ಯೋಜನೆ :

ಪರಿಶಿಷ್ಟ ಜಾತಿಯ ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯರಿಗೆ ಸಾಗುವಳಿಗೆ ಯೋಗ್ಯವಾಗಿರುವ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನು ಖರೀದಿಸಲು ಈ ಯೋಜನೆಯಡಿ ಸಹಾಯಧನ ಮತ್ತು ಸಾಲ ಸೌಲಭ್ಯ ಒದಗಿಸಲಾಗುವುದು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯ ಮುಖಾಂತರ ಭೂಮಿ ಖರೀದಿಸುವ ದರ ನಿಗದಿಪಡಿಸಲಾಗುವುದು. ಸದರಿ ಸಮಿತಿ ನೋಂದಾಯಿತ ಮಾರ್ಗಸೂಚಿ ಬೆಲೆಯನ್ನಾಧರಿಸಿ ದರ ನಿಗದಿ ಪಡಿಸಲಿದ್ದು, ಘಟಕ ವೆಚ್ಚದ ಗರಿಷ್ಠ ಮಿತಿ ರೂ. 10.00 ಲಕ್ಷಗಳನ್ನು ಮೀರದಂತೆ ಖರೀದಿಸಲು ಸರ್ಕಾರ ಮಂಜೂರಾತಿ ನೀಡಿದೆ. ಜಿಲ್ಲಾ ಸಮಿತಿಯಿಂದ ನಿಗದಿಪಡಿಸಿದ ದರದಂತೆ ಘಟಕ ವೆಚ್ಚದ ಶೇ. 50 ಬಾಗ ಸಹಾಯಧನ ಹಾಗೂ ಶೇ. 50 ಭಾಗ ಅವಧಿಸಾಲವಾಗಿರುತ್ತದೆ. ಅವಧಿಸಾಲಕ್ಕೆ ವಾರ್ಷಿಕ ಶೇ. 6 ರ ಬಡ್ಡಿ ವಿಧಿಸಲಾಗುವುದು. ಸಾಲ ಮರುಪಾವತಿಗೆ 10 ವರ್ಷಗಳ ಕಾಲಾವಕಾಶ ಇರುತ್ತದೆ. ಈ ಯೋಜನೆಯಡಿ ಖರೀದಿಸುವ ಜಮೀನು ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯರ ಹೆಸರಿನಲ್ಲಿ ನೋಂದಣಿ ಮಾಡಲಾಗುವುದು.

## 4.ಗಂಗಾ ಕಲ್ಯಾಣ ಯೋಜನೆ :

### ಅ) ವೈಯಕ್ತಿಕ ಕೊಳವೆ ಬಾವಿ ಯೋಜನೆ :

ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿಸಣ್ಣ ರೈತರಿಗೆ (2 ರಿಂದ 5 ಎಕರೆ ಖುಷ್ಕಿ ಜಮೀನು ಹೊಂದಿರುವವರಿಗೆ) ನೀರಾವರಿಗೋಸ್ಕರ ಕೊಳವೆ ಬಾವಿ ಸೌಲಭ್ಯ ಒದಗಿಸಲಾಗುವುದು. ಯೋಜನೆಯ ವೆಚ್ಚ ರೂ. 2,00,000/- ಇದ್ದು, ರೂ. 1,50,000/- ಸಹಾಯಧನ ಮತ್ತು ರೂ.50,000/-ದವರೆಗೆ ಅವಧಿಸಾಲವಾಗಿರುತ್ತದೆ. ಅವಧಿಸಾಲಕ್ಕೆ ಶೇ.6 ರಷ್ಟು ಬಡ್ಡಿಯನ್ನು ವಿಧಿಸಲಾಗುವುದು. ಸಾಲವನ್ನು 16 ಅರ್ಧವಾರ್ಷಿಕ ಕಂತುಗಳಲ್ಲಿ (8 ವರ್ಷ) ಮರುಪಾವತಿ ಮಾಡಬೇಕಾಗಿರುತ್ತದೆ. ಈ ಯೋಜನೆಯಡಿ ಕೊಳವೆ ಬಾವಿ ಕೊರೆದು, ಪಂಪ್‌ಸೆಟ್ ಅಳವಡಿಸಿ, ವಿದ್ಯುತ್ ಸಂಪರ್ಕ ಒದಗಿಸಲಾಗುವುದು. ಪ್ರತಿಯೊಂದು ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಸರಾಸರಿ. ರೂ. 50,000/- ಗಳನ್ನು ಹೆಸ್ಕಾಂಗೆ ಬಿಡುಗಡೆ ಮಾಡಲಾಗುತ್ತಿದೆ.

### ಆ) ಸಾಮೂಹಿಕ ನೀರಾವರಿ (ಏತ ನೀರಾವರಿ) ಯೋಜನೆ :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿಗೆ ನದಿ ಅಥವಾ ಹಳ್ಳಗಳಿಂದ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಪ್ರತಿ ಘಟಕದಲ್ಲಿ 3 ರಿಂದ 8 ಫಲಾನುಭವಿಗಳು ಇರುತ್ತಾರೆ. ಈ ಯೋಜನೆಯಡಿ ಘಟಕ ವೆಚ್ಚ 8 ಎಕರೆಗೆ ರೂ. 2.53 ಲಕ್ಷ ಮತ್ತು 15 ಎಕರೆಗೆ ರೂ. 3.59 ನಿಗದಿಪಡಿಸಲಾಗಿದೆ. ಇದಕ್ಕೂ ಮೇಲ್ಪಟ್ಟು ಹಣ ಅವಶ್ಯವಿದ್ದಲ್ಲಿ, ಸಂಬಂಧಪಟ್ಟ ಫಲಾಪೇಕ್ಷಿಗಳೇ ಭರಿಸಬೇಕಾಗುತ್ತದೆ.

## 5.ಮೈಕ್ರೋ ಕ್ರೆಡಿಟ್ (ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆ :

ಸ್ವ ಸಹಾಯ ಸಂಘಗಳ ಸದಸ್ಯರಿಗೆ, ಲಾಭದಾಯಕ ಚಟುವಟಿಕೆಗಳನ್ನು ಕೈಗೊಳ್ಳಲು ಸಾಲಸೌಲಭ್ಯ ಕಲ್ಪಿಸಲಾಗುವುದು. ಪ್ರತಿ ಸದಸ್ಯರಿಗೆ ರೂ. 15,000/- ಸಾಲ ಸೌಲಭ್ಯ ನೀಡಲು ಅವಕಾಶವಿದ್ದು, ಇದರಲ್ಲಿ ರೂ. 10,000/- ಸಹಾಯಧನ ಮತ್ತು ರೂ. 5,000/- ಸಾಲವಾಗಿದ್ದು, ಶೇ. 4 ರಷ್ಟು ಬಡ್ಡಿಯೊಂದಿಗೆ 36 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

---

**(ಪರಿಶಿಷ್ಟ ಜಾತಿಯವರಿಗೆ ಮಾತ್ರ)**

## 6.ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ :

ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮುಖೇನ ಗುರುತಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯಿಂದ ಅನುಮೋದಿತವಾದ ಸಫಾಯಿ ಕರ್ಮಚಾರಿ ಮತ್ತು ಅವರ ಅವಲಂಬಿತರಿಗೆ ಈ ಯೋಜನೆಯಡಿ ಸಾಲಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆಯಡಿ ಸ್ವಯಂ ಉದ್ಯೋಗ ಚಟುವಟಿಕೆಗಳಾದ ಹೈನುಗಾರಿಕೆ, ಸಣ್ಣ ವ್ಯಾಪಾರ, ದಿನಸಿ ಅಂಗಡಿ, ಸೈಕಲ್ ಶಾಪ್, ಸಣ್ಣ ಕೈಗಾರಿಕೆ, ಸೇವೆ, ವ್ಯಾಪಾರ, ಸ್ಯಾನಿಟರಿ ಮಾರ್ಟ್, ಇತ್ಯಾದಿ ಚಟುವಟಿಕೆಗಳಿಗೆ NSKFDC ನವದೆಹಲಿ ಇವರ ಸಹಯೋಗದೊಂದಿಗೆ ಸಾಲಸೌಲಭ್ಯ ಒದಗಿಸಲಾಗುವುದು. ರೂ. 1.00 ಲಕ್ಷದ ಮಿತಿಯ ಘಟಕಗಳಿಗೆ ಶೇ.50 ಭಾಗ ಅಥವಾ ಗರಿಷ್ಠ ರೂ.10,000/- ಸಹಾಯಧನ ಮತ್ತು ಉಳಿದ ಮೊತ್ತ ಅವಧಿಸಾಲವಾಗಿರುತ್ತದೆ. ರೂ. 1.00 ಲಕ್ಷ ಮೇಲ್ಪಟ್ಟ ಘಟಕಗಳಿಗೆ ಶೇ.5 ಭಾಗ ಅಂಚಿನ ಹಣ, ಶೇ. 5 ಭಾಗ ಫಲಾನುಭವಿಯ ವಂತಿಗೆ ಮತ್ತು ಉಳಿದ ಶೇ.90 ಭಾಗ ಅವಧಿಸಾಲವಾಗಿರುತ್ತದೆ.

## ನಿಗಮದ ವಿವಿದ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅಂಶಗಳು:

1. ಅರ್ಜಿದಾರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ಹಾಗೂ ಕಳೆದ 15 ವರ್ಷದಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಅರ್ಜಿದಾರರು 18 ವರ್ಷದಿಂದ 60 ವರ್ಷದ ವಯೋಮಾನದವರಾಗಿರಬೇಕು.
3. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
4. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
5. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ.81,000/- ಗ್ರಾಮೀಣ ಹಾಗೂ ರೂ.1,03,000/- ನಗರ ಪ್ರದೇಶದವರಿಗೆ..
6. ವಿಕಲಚೇತನರು ಸೌಲಭ್ಯ ಪಡೆಯಲು ಸಂಬಂಧಪಟ್ಟ ದೃಡೀಕರಣ ಪತ್ರವನ್ನು ನೀಡುವುದು.
7. ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೊಂದಣಿ ಮಾಡಿಕೊಂಡ ಪರಿಶಿಷ್ಟ ಜಾತಿಯ ಅಂಗವಿಕಲ ಫಲಾಪೇಕ್ಷಿಗಳಿಗೆ ನೇರವಾಗಿ ಜಿಲ್ಲಾ ವ್ಯವಸ್ಥಾಪಕರುಗಳ ಶಿಪಾರಸ್ಸಿನನ್ವಯ ಸೌಲಭ್ಯ ಕಲ್ಪಿಸಲಾಗುವುದು.
8. ಭೂ ಒಡೆತನ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಾಗಿರಬೇಕು. ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬಾರದು.
9. ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು.
10. ವಾಹನಗಳಿಗೆ ಸೌಲಭ್ಯ ಪಡೆಯಲು ಡ್ರೈವಿಂಗ್ ಲೈಸೆನ್ಸ್‌ನೊಂದಿಗೆ ಬ್ಯಾಡ್ಜ್ ಹೊಂದಿರಬೇಕು.
11. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಸೌಲಭ್ಯ ಪಡೆಯಲು ಸಮೀಕ್ಷೆಯಲ್ಲಿ ಗುರ್ತಿಸಿದ ಸಫಾಯಿ ಕರ್ಮಚಾರಿ ಅಥವಾ ಅವರ ಅವಲಂಬಿತರಾಗಿರಬೇಕು.

## ಅರ್ಜಿಯೊಂದಿಗೆ ಫಲಾಪೇಕ್ಷಿಯು ಸಲ್ಲಿಸಬೇಕಾದ ದಾಖಲಾತಿಗಳು:

1. ಅರ್ಜಿಯೊಂದಿಗೆ ಭಾವಚಿತ್ರ, 2. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ , 3. ಕುಟುಂಬದ ವಾರ್ಷಿಕ ಆದಾಯ ಪತ್ರ 4. ಪಡಿತರ ಚೀಟಿ/ಮತದಾರರ ಗುರುತಿನ ಚೀಟಿ/ಆದಾರ ಕಾರ್ಡ್ ಪ್ರತಿ,
5. ಯೋಜನಾ ವರದಿ / ದರಪಟ್ಟಿ ಸಹಿತ 6. ವಾಹನವಾಗಿದ್ದಲ್ಲಿ, ಸಂಬಂಧಪಟ್ಟ ವಾಹನ ಚಾಲನಾ ಪರವಾನಗಿ-ಬ್ಯಾಡ್ಜ್ ಸಹಿತ

## ಫಲಾನುಭವಿಗಳ ಆಯ್ಕೆ ವಿಧಾನ:

- ***ಫಲಾಪೇಕ್ಷಿಗಳನ್ನು ಸರ್ಕಾರದ ಆದೇಶದಂತೆ ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.***